ಕಾಯುವ ಮಾರಿ ಎಂದು ಮಾಡಲಾಗಿತ್ತು. ಹಾಗೂ ಆ ಮಾರಿಗೆ ಮರಿಯನ್ನು ಬಲಿಕೊಟ್ಟು ಹರಕೆ ಅರ್ಪಿಸಿ ಊರನ್ನು ಕಾಪಾಡುವ ಸಲುವಾಗಿ ಮೂರು ವರ್ಷಗಳಿಗೊಮ್ಮೆ ನಡೆಸಿಕೊಂಡು ಬರುವ ಆಚರಣೆ ನಡೆದುಕೊಂಡು ಬಂದಿತ್ತು. ಮಾರಿಯ ವಿಗ್ರಹವನ್ನು ದುರ್ಗದ ಕೋಟೆ ಮುಂದಿನ ಕಾಳಿಕ ಮಠದ ಬಳಿಯಿರುವ ಅಚಾರರಿಂದ ಮಾರಿಯ ಕುಳಿತಿರುವ ಸುಂದರ ಮೂರ್ತಿಯನ್ನು ಕೆತ್ತಿಸಿ ಊರ ಒಳಗಿನ ದೇವಸ್ಥಾನದಲ್ಲಿ ಪ್ರತಿಷ್ಠಾಪನೆ ಮಾಡಲಾಗಿತ್ತು. 'ಸೀಮೇ ಜಾಲಿ, ಲಂಟನ ಬೆಳೆದು ಅದರ ಸುತ್ತ ಸ್ಯಾದ್ರೆ. ಅದನ್ನೆಲ್ಲ ಕಡಿದು ಜಾಗವನ್ನೆಲ್ಲ ಚೊಕ್ಕಟ ಮಾಡುವುದರಲ್ಲಿ ಸಾಕುಸಾಕಾಗೋತು ಅಮ್ಮೀನೆ' ಅಂದನು ಕೃಷ್ಣಪ್ಪ ತನ್ನ ಹೆಂಡತಿಗೆ. ಅಷ್ಟೊತ್ತಿಗೆ ಲಕ್ಕಮ್ಮ ಗಂಗಳದಲ್ಲಿ ಮುದ್ದೆಯನ್ನು ಮತ್ತು ಬದನೇಕಾಯಿ ಸಾರನ್ನು ತಂದು ಅವನ ಮುಂದೆ ಇಟ್ಟಳು. ಮುದ್ದೆಯನ್ನು ಮುರಿಯುತ್ತ, 'ಚುಕ್ಕಿ, ನಿನ್ನ ಗಂಡ ಯಾವಾಗ ಬತ್ತನೆ, ಇವೊತ್ತೋ ನಾಳಿಕ್ಕೋ?' ಎಂದು ಕೇಳಿದ. ಮತ್ತೊಂದು ತುತ್ತನ್ನು ಮುರಿಯುತ್ತ, 'ಈ ಸಲ ಅಮ್ಮನಿಗೆ ಹೂ ಮುಡಿಸ್ತಾರಲ್ಲ, ಹೂವಿನ ಪ್ರಸಾದ ಕೇಳಬೇಕು, ಎಷ್ಟು ಜನಕ್ಕೆ ಆ ತಾಯಿ ಕಣ್ಣುಬಿಟ್ಟಿದ್ದಾಳೆ, ಆಯಮ್ಮನ ಸೇವೆನ ತಲೆತಲಾಂತರದಿಂದ ಮಾಡ್ಕೆಂಬದಿದೀವಿ, ನಮ್ಮ ಕಡೆಕೆ ಕಣ್ಣು ತೆರಿದೆ ಏನು ಮಾಡ್ತಾಳೆ. ಪೂಜಾರ ಕರಿಯಣ್ಣ ಊರ ಬಾಕ್ಲುತಾಗೆ ಬಂದಿದ್ದನಲ್ಲ ಕೇಳ್ತಿದ್ದ ನಿನ್ನ ಅಳಿಯ ಬಂದ್ನೆ ಅಮ್ತ' ಎಂದ.

ಇವನ ಮಾತುಗಳನ್ನು ಮನೆಯ ಮುಂದಿನ ಚಪ್ಪರದ ಗೂಟಕ್ಕೆ ಕಟ್ಟಲಾಗಿದ್ದ, ಹಬ್ಬಕ್ಕೆ ಕಡಿದು ಪಾಲು ಮಾಡಿ ಲಾಭವನ್ನು ಮಾಡಿಕೊಳ್ಳುವ ಉದ್ದೇಶದಿಂದ ತಂದಿದ್ದ ಬೂದು ಬಣ್ಣದ ಹೋತ ಇವನ ಮಾತುಗಳನ್ನು ಆಲಿಸುವಂತೆ ನೋಡ್ತಾನೇ ಇತ್ತು. ಈ ಸಲ ಇದರ ಮಾಂಸದ ಜೊತೆಗೆ ಊರಬಾಗಿಲ ಗುಡ್ಡೆಯ ಹತ್ತಿರ ಬಲಿಕೊಡುವ ಮರಿಯ ಮಾಂಸವೂ ಕೃಷ್ಣಪ್ಪನಿಗೆ ಸಿಗುತ್ತಿದ್ದುದರಿಂದ ಹಬ್ಬಕ್ಕೆ ಭಾರಿ ಬಾಡೂಟ ಕಾದಿತ್ತು. 'ಅಪ್ಪ, ಯಾಕ ಓತ ನಿನ್ನೇ ನೋಡ್ತಾ ಐತೆ, ಪಾಪ ಅದಿಕ್ಕೇನಾದ್ರು ಕನಸುಗಿನಸು ಬಿತ್ತೋ ಏನೋ' ಎಂದಳು. ತಕ್ಷಣಕ್ಕೆ ಅವಳ ಅಮ್ಮ, 'ನಿನಗೆ ಬೀಳ್ತಾವೆ ನೋಡಮ್ಮ ಕನಸು, ಅದುಕ್ಕೆಂಥ ಕನಸೇ?' ಎಂದು ವ್ಯಂಗ್ಯ ಮಾಡಿದಳು. 'ಇಲ್ಲದಿದ್ದರೆ ನಮ್ಮಪ್ಪಯ್ಯನ ಮಾತುಗಳ್ನೆ ಯಾಕಂಗೆ ಮನಸುರ ಥರ ಕೇಳಸ್ಕೆಮ್ತಿತ್ತು?' ಎಂದಳು ಚುಕ್ಕಿ. ಮತ್ತೆ ಮಾತನ್ನು ಲಕ್ಕಮ್ಮ ಬದಲಾಯಿಸಿ, 'ಈ ಸಲ ಆದ್ರು ಆ ಮಾತಾಯಿ ನನ್ನ ಮಗಳು ಹೊಟ್ಟೆಗೆ ಎಂತಾದಾದ್ರು ಒಂದು ಚಿಗುರ್ನ ಚಿಗುರುಸ್ಲಿ' ಎಂದಳು. 'ಕೊಡದೆ ಎಲ್ಲಿಗೆ ಹೋಗ್ತಾಳೆ ಸುಮ್ಕಿರು' ಎಂದ ಅವಳ ಗಂಡ. 'ನೀವು ಅದ್ಯಾಕಂಗೆ ತಲೆಕೆಡಿಸಿಕೆಂಡಿದಿರ ಅಮ್ಮಿನಿ' ಚುಕ್ಕಿ. 'ಇನ್ನೆಷ್ಟು ದಿನ ಅಮ್ತ ಹಿಂಗೇ ಇರ್ತೀಯಾ?' ಲಕ್ಕಮ್ಮ. 'ನಾವೇನು ಸುಮ್ನೆ ಇಲ್ಲ, ಯಾವ ಪಂಡಿತರುತಕೋದ್ರು, ಡಾಕ್ಟ್ರುತಕೋದ್ರು ಆಗುತ್ತೆ ಅಮ್ತಾರೆ. ಔಷಧಿನು ಕೊಟ್ಟಿದ್ದಾರೆ.' ಹೋತ ಈಗ ಈ ಮೂವರ ಮಾತುಗಳನ್ನು ಕೇಳಿಸಿಕೊಳ್ಳುತ್ತ ತುಂಬ ಗಂಭೀರವಾಗಿ ಇವರನ್ನೇ ನೋಡ್ತಾ ಇತ್ತು.

ಅವಳಿಗೆ ಆರು ತಿಂಗಳ ಹಿಂದೆ ತನ್ನ ಗಂಡನ ಮನೆಯವರು ಶಿಲೆ ಪೂಜೆ ಮಾಡಿಸಿದ ಆಚರಣೆ ಮನಸ್ಸಿನ ತುಂಬ ಹರಡಿಕೊಂಡು ಆ ನೆನಪುಗಳು ಒಂದೊಂದೇ ಕಾಣತೊಡಗಿದವು. ಕಲ್ಲು, ನೀರು ಕರಗುವ ಹೊತ್ತು. ಕತ್ತಲು ದಟ್ಟವಾಗಿ ಇತ್ತು. ಅದಕ್ಕೆ ಅಮಾವಾಸೆಯೂ ಸಹ ಸೇರಿಕೊಂಡು ಅದನ್ನು ಇನ್ನಷ್ಟು ಘನಗೊಳಿಸುತ್ತಿತ್ತು. ರಾತ್ರಿಯ ಹುಳಗಳ ಝೀ ಎನ್ನುವ ಸದ್ದು ಕತ್ತಲಲ್ಲಿ ಮುಳುಗಿಹೋಗಿತ್ತು. ಮಣ್ಣಿನ ಸೋರೆಯ ಮುಚ್ಚಳದಲ್ಲಿ ತಂಬಿಟ್ಟಿನ ಉದ್ದನೆಯ ಹುಂಡೆಗಳನ್ನು ಇಟ್ಟು, ಅವುಗಳಿಗೆ ವೀಳ್ಯೆದೆಲೆಗಳನ್ನು ಅಲಂಕರಿಸಲಾಗಿತ್ತು. ಆ ಎರಡು ತಂಬಿಟ್ಟಿನ ಉದ್ದನೆಯ ಹುಂಡೆಗಳ ಮೇಲೆ ಬತ್ತಿಯ ಜ್ಯೋತಿ. ಕೆಂಪು ಕಣಗಿಲೆ, ಬಿಳಿ ಕಣಗಿಲೆ, ಎಕ್ಕದ ಹೂವು, ಬಿಲ್ವ ಪತ್ರೆ, ಬನ್ನಿ ಪತ್ರೆಗಳನ್ನಿಡಲಾಗಿತ್ತು. ಚುಕ್ಕಿ ಹೊರಟಳು ಇದನ್ನು ಹಿಡಿದುಕೊಂಡು. ಈಗ ದೂರದಲ್ಲಿ ನಾಯಿ ಬೊಗಳುವ ಸದ್ದು. ಆಮೇಲೆ ನವಿಲೊಂದು ತೋಟದ ಓಣಿಯ ಕಡೆಯಿಂದ ಕೂಗುತ್ತಿದೆ. ದೂರದಲ್ಲಿ ತೋಳಗಳು ಊಳಿಡುತ್ತಿವೆ.